ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್.

ರಿಜಿಸ್ಟರ್ಡ್ ನಂ. ಆರ್‌ಎನ್‌ಎಸ್ -19

5ನೇ ವರ್ಷ 5ನೇ ಸಂಚಿಕೆ ಕೊಪ್ಪ 21-9-1986 ಭಾನುವಾರ ಬೆಲೆ 20 ಪೈಸೆ

ಸಾಕ್ಷರತಾ ದಿನಾಚರಣೆ

ಕೊಪ್ಪ : ಅಂತರರಾಷ್ಟ್ರೀಯ ಸಾಕ್ಷರತಾ ದಿನಾಚರಣೆ ಮತ್ತು ಸಾಕ್ಷರತಾ ಸಪ್ತಾಹ ಸೆ. 14 ರಂದು ಕ್ಷೇತ್ರಾಭಿವೃದ್ಧಿ ಅಧಿಕಾರಿ ಪಿ. ಬಾಲಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಬಾಲವಿಕಾಸ ಯೋಜನಾಧಿಕಾರಿ ಸತ್ಯನಾರಾಯಣ ಮುಖ್ಯ ಅತಿಥಿಯಾಗಿದ್ದರು. ತಾ|| ವ. ಶಿ. ಮೇಲ್ವಿಚಾರಕ ಬಿ. ರಂಗಸ್ವಾಮಿ ಸ್ವಾಗತಿಸಿ, ಕೆ. ಎ. ಶಂಕರಪ್ಪ ವಂದಿಸಿದರು.

ಏಲಕ್ಕಿ ಮಾರುಕಟ್ಟೆ ನಿಯಂತ್ರಣಕ್ಕಾಗಿ ಮಂಡಳಿಯಿಂದಲೇ ಸಕಲೇಶಪುರ, ಮಡಿಕೇರಿಗಳಲ್ಲಿ ಹರಾಜು ಕೇಂದ್ರ

ಸಕಲೇಶಪುರ: ಇಲ್ಲಿನ ಏಲಕ್ಕಿ ಮಂಡಳಿ ಹರಾಜು ಕೇಂದ್ರದಲ್ಲಿ ಈ ವರ್ಷದ ಪ್ರಪ್ರಥಮ ಮೊದಲ ಹರಾಜು, ಸೆ. 15ರಂದು ಮಂಡಳಿಯ ಸದಸ್ಯರಾದ ಡಾ|| ಎ. ಎಲ್. ಜಯದೇವಪ್ಪ ಜ್ಯೋತಿ ಬೆಳಗಿಸುವುದರೊಂದಿಗೆ ಹಾಗೂ ಮಾಜಿ ಸದಸ್ಯ ಗಣಪಯ್ಯನವರ ಉದ್ಘಾಟನೆಯೊಂದಿಗೆ ಆರಂಭವಾಯಿತು.

ಭಾರತದ ಆಂತರಿಕ ಮಾರುಕಟ್ಟೆಯಲ್ಲೇ ವಿಶೇಷವಾಗಿ ಬಳಕೆಯಾಗುವ ಕರ್ನಾಟಕದ ಏಲಕ್ಕಿಗೆ ಮಂಡಳಿಯು ವ್ಯಾಪಕ ಪ್ರಚಾರ ಕೊಡಬೇಕು. ಮಿಠಾಯಿ, ಬ್ರೆಡ್, ಐಸ್ ಕ್ರೀಂ, ತಂಪು ಪಾನೀಯಗಳಿಗಾಗಿ ಏಲಕ್ಕಿ ಬಳಸುವ ಗ್ರಾಹಕರಿಗೆ ಹೆಚ್ಚಿನ ಉತ್ತೇಜನ ನೀಡಬೇಕು ಎಂದು ಗಣಪಯ್ಯ ಆಗ್ರಹಿಸಿದರು.

ಮೊದಲ ದಿನದ ಹರಾಜಿನಲ್ಲಿ ಏಲಕ್ಕಿ ಕಿಲೋಗೆ ಗರಿಷ್ಠ 240 ರೂ. ಗಳೂ, ಸರಾಸರಿ 150 ರೂ. ಗಳೂ ಬಂದುವು.

ಮಾರುಕಟ್ಟೆ ನಿಯಂತ್ರಣಕ್ಕಾಗಿ 2 ಹರಾಜು ಕೇಂದ್ರಗಳು

ಏಲಕ್ಕಿ ಮಾರುಕಟ್ಟೆಯನ್ನು ನಿಯಂತ್ರಿಸಿ, ಏಲಕ್ಕಿಗೆ ಉತ್ತಮ ಬೆಲೆ ದೊರಕಿಸಿಕೊಡುವ ಸಲುವಾಗಿ ಮಂಡಳಿಯು ರಾಜ್ಯದ ಪ್ರಮುಖ ಏಲಕ್ಕಿ ಮಾರುಕಟ್ಟೆಗಳಾದ ಸಕಲೇಶಪುರ ಮತ್ತು ಮಡಿಕೇರಿಗಳಲ್ಲಿ ಹರಾಜು ಕೇಂದ್ರಗಳನ್ನು ಆರಂಭಿಸಿದೆ. ಸಕಲೇಶಪುರದಲ್ಲಿ ಪ್ರತಿ ಸೋಮವಾರ ಹಾಗೂ ಮಡಿಕೇರಿಯಲ್ಲಿ ಪ್ರತಿ ಬುಧವಾರ ನಡೆಯುವ ಈ ಹರಾಜುಗಳಲ್ಲಿ ಮಂಗಳೂರು, ಬೆಂಗಳೂರು ಮತ್ತಿತರ ಕೇಂದ್ರಗಳ ವ್ಯಾಪಾರಸ್ಥರು ಮತ್ತು ರಫ್ತುದಾರರು ಭಾಗವಹಿಸುತ್ತಾರೆ.

ಕೇವಲ ಶೇ. 1ರಷ್ಟು ಕಡಿಮೆ ಕಮಿಶನ್‌ನಲ್ಲಿ ಬೆಳೆಗಾರರ ಏಲಕ್ಕಿಯನ್ನು ಈ ಕೇಂದ್ರಗಳಲ್ಲಿ ಹರಾಜು ಮಾಡಿಕೊಡುವುದಲ್ಲದೆ, ಪೂರ್ಣ ಕ್ರಯವನ್ನು ಅದೇ ದಿನವೇ ಬೆಳೆಗಾರರಿಗೆ ಕೊಡಲೂ ಏರ್ಪಾಡು ಮಾಡಲಾಗಿದೆ. ಅಲ್ಲದೆ ವಾರದ ಎಲ್ಲಾ ದಿನಗಳಲ್ಲೂ ಏಲಕ್ಕಿಯನ್ನು ಸ್ವೀಕರಿಸಲಾಗುತ್ತಿದೆ.

ಬೆಳೆಗಾರರು 'ಮಧ್ಯವರ್ತಿಗಳ' ಮೊರೆ ಹೋಗದೆ ಈ ಹರಾಜು ಕೇಂದ್ರಗಳ ಸದುಪಯೋಗ ಪಡೆದುಕೊಳ್ಳಬೇಕೆಂದು ಮಂಡಳಿ ಬೆಳೆಗಾರರನ್ನು ವಿನಂತಿಸಿದೆ.

ಉತ್ತಮ ಬೆಲೆ

ಏಲಕ್ಕಿಯ ಧಾರಣೆ ಈಗ ಬಹಳವಾಗಿ ಉತ್ತಮಗೊಂಡಿದ್ದು, ನಮ್ಮ ಮಲೆನಾಡಿನ ಏಲಕ್ಕಿಗೆ 150ರಿಂದ 180 ರೂ. ಗಳವರೆಗೂ ದೊರೆಯುತ್ತಿರುವುದಾಗಿ, ಏಲಕ್ಕಿ ಮಾರಾಟ ಮಾಡಿ ಬಂದ ಕೆಲ ಬೆಳೆಗಾರರು 'ಮುಂಜಾವು'ಗೆ ತಿಳಿಸಿದ್ದಾರೆ. ಈ ವಿಚಾರದ ಮಾಹಿತಿಯಿಲ್ಲದ ಬೆಳೆಗಾರರಿಂದ ಸ್ಥಳೀಯ ಮಧ್ಯವರ್ತಿಗಳು ಕೇವಲ 90-100 ರೂ. ಗಳಿಗೆ ಏಲಕ್ಕಿ ಕೊಳ್ಳುತ್ತಿರುವುದಾಗಿಯೂ ತಿಳಿದುಬಂದಿದೆ.

ತಕ್ಷಣದಿಂದ 2 ಹೊತ್ತೂ ಹಾಲಿನ ವ್ಯಾನ್ ಓಡಾಟ, ಪ್ರತಿ ಬ್ಯಾಂಕಿನಿಂದ ತಲಾ 10 ಹಸುವಿಗೆ ಸಾಲ ನೀಡಿಕೆ

— ಬಾಳೆಹೊನ್ನೂರು ಸಭೆಯಲ್ಲಿ ಒಡಂಬಡಿಕೆ

ಬಾಳೆಹೊನ್ನೂರು : ಇಲ್ಲಿ ಸೆ. 19 ರಂದು ಹೈನುಗಾರಿಕೆ ಅಭಿವೃದ್ಧಿ ಬಗ್ಗೆ ನಡೆದ ವಿಶೇಷ ಸಭೆಯಲ್ಲಿ ಅತಿ ಮುಖ್ಯವಾದ ಕೆಲವು ತೀರ್ಮಾನಗಳನ್ನು ತೆಗೆದುಕೊಳ್ಳಲಾಗಿದೆ.

ಈ ಸಭೆಯಲ್ಲಿ ಡೈರಿ ನಿಗಮದ ಹಿರಿಯ ಅಧಿಕಾರಿಗಳು, ಜಿಲ್ಲಾಧಿಕಾರಿ ಮತ್ತು ವಿಶೇಷ ಜಿಲ್ಲಾಧಿಕಾರಿಗಳು, ಜಿಲ್ಲೆಯ ಲೀಡ್ ಬ್ಯಾಂಕ್ ಆದ ಕಾರ್ಪೊರೇಷನ್ ಬ್ಯಾಂಕಿನ ಜಿಲ್ಲಾ ಮ್ಯಾನೇಜರ್ ನಾಗೇಶರಾವ್, ಚಿ. ಕೊ. ಗ್ರಾಮೀಣ ಬ್ಯಾಂಕ್ ಅಧ್ಯಕ್ಷ ಅಚ್ಯುತ ಪೈ, ಇತರ ಬ್ಯಾಂಕ್‌ಗಳ ಅಧಿಕಾರಿಗಳು ಪಶು ವೈದ್ಯಾಧಿಕಾರಿಗಳು ಹಾಲು ಉತ್ಪಾದಕರುಗಳು ಭಾಗವಹಿಸಿದ್ದರು.

ಎರಡು ಹೊತ್ತೂ ಸಂಗ್ರಹಣೆ

ಈ ಹಿಂದೆಯೇ ವರದಿ ಮಾಡಿರುವಂತೆ, ಜಯಪುರ, ಕೊಪ್ಪ, ಹರಿಹರಪುರ, ಬಿಳಾಲುಕೊಪ್ಪ, ಬಸರಿಕಟ್ಟೆ, ಬಾಳೆಹೊನ್ನೂರು ಮಾರ್ಗವಾಗಿ ಹಾಸನಕ್ಕೆ ಪ್ರತಿದಿನ ಎರಡು ಹೊತ್ತೂ ಹಾಲನ್ನು ಸಂಗ್ರಹಿಸಿ ಒಯ್ಯಲು ಸೆ. 22ರಿಂದಲೇ ವಾಹನವನ್ನು ಬಿಡಲಾಗುವುದೆಂದು ಡೈರಿ ಅಧಿಕಾರಿಗಳು ತಿಳಿಸಿದರು.

ಇದಕ್ಕೆ ಪ್ರತಿಯಾಗಿ ರೈತರು ಆದಷ್ಟೂ ಹೆಚ್ಚು ಹಾಲನ್ನು ಡೈರಿಗೇ ನೀಡಬೇಕು ಹಾಗೂ ಹೆಚ್ಚೆಚ್ಚು ಉತ್ತಮ ತಳಿಯ ಹಸುಗಳನ್ನು ಸಾಕಿ ಹಾಲು ಉತ್ಪಾದನೆ ಅಧಿಕಗೊಳಿಸಬೇಕು ಎಂದು ಅವರು ಮನವಿ ಮಾಡಿದರು.

ಬ್ಯಾಂಕ್ ಸಾಲ ವ್ಯವಸ್ಥೆ

ಈ ನಿಟ್ಟಿನಲ್ಲಿ ಎಲ್ಲಾ ಬ್ಯಾಂಕುಗಳೂ ಹಾಲು ಉತ್ಪಾದಕರಿಂದ ಸೆ. 30ರೊಳಗಾಗಿ ಅರ್ಜಿಗಳನ್ನು ಪಡೆದು, ಅವನ್ನು ಪರಿಶೀಲಿಸಿ ಅಕ್ಟೋಬರ್ 15ರೊಳಗಾಗಿ ಪ್ರತಿ ಬ್ಯಾಂಕೂ ಕನಿಷ್ಠ ಪಕ್ಷ ತಲಾ 10 ಮಿಶ್ರತಳಿ ಹಸುಗಳಿಗಾದರೂ ಸಾಲವನ್ನು ವಿತರಿಸಬೇಕೆಂದು ಜಿಲ್ಲಾಧಿಕಾರಿಗಳು ಸೂಚಿಸಿದ ಮೇರೆಗೆ ಎಲ್ಲಾ ಬ್ಯಾಂಕುಗಳಿಗೂ ಆದೇಶ ನೀಡಲಾಯಿತು. ಆಯಾ ಸಹಕಾರ ಸಂಘಗಳೂ ಸಹ ಅರ್ಜಿದಾರರ ಹೆಸರುಗಳನ್ನು ಶಿಫಾರ್ಸು ಮಾಡಲು ಕೋರಲಾಯಿತು. ಅರ್ಜಿ ಪಡೆದು ಬ್ಯಾಂಕಿಗೆ ಸಲ್ಲಿಸುವ ಜವಾಬ್ದಾರಿಯನ್ನು ಆಯಾ ತಾಲ್ಲೂಕಿನ ಬಿ. ಡಿ. ಒ.ಗಳಿಗೆ ವಹಿಸಲಾಯಿತು.

ಇನ್ನೂ ರಿಜಿಸ್ಟರ್ ಆಗದಿರುವ ಹಾಲು ಉತ್ಪಾದಕರ ಸಂಘಗಳನ್ನು ರಿಜಿಸ್ಟರ್ ಮಾಡುವ ಬಗ್ಗೆ ಇರುವ ಅಡ್ಡಿಗಳನ್ನು ನಿವಾರಿಸಿ ಸೆ. 30ರೊಳಗಾಗಿ ಕಾದಿರುವ ಎಲ್ಲಾ ಸಂಘಗಳನ್ನೂ ರಿಜಿಸ್ಟರ್ ಮಾಡಲು ಹಾಗೂ ಇದಕ್ಕೆ ಬೇಕಾದ ದಾಖಲೆಗಳನ್ನು ಒದಗಿಸಲೂ ಸಹ ಸಂಬಂಧಪಟ್ಟವರಿಗೆ ಸೂಚಿಸಲಾಯಿತು.

ಶೈತ್ಯೀಕರಣ ಘಟಕ

ಬಾಳೆಹೊನ್ನೂರಿನಲ್ಲಿ ಹಾಲಿ ಚಿಲ್ಲರ್ (ಶೈ|| ಯಂತ್ರ) ಇಲ್ಲವಾಗಿದ್ದು, ಅದನ್ನು ಒದಗಿಸಲು ಕನಿಷ್ಠ ಪಕ್ಷ 500 ಲೀಟರ್ ನಷ್ಟಾದರೂ ಹಾಲು ಸಂಗ್ರಹವಾಗಬೇಕಾಗಿದೆ. ಸದ್ಯ ಹಾಲಿನ ಸಂಗ್ರಹಣೆ 200 ಲೀ. ನಷ್ಟಕ್ಕೆ ಕುಸಿದಿದೆ ಎಂದು ಅಧಿಕಾರಿಗಳು ತಿಳಿಸಿ, ಹಾಲು ಸಂಗ್ರಹ ಅಗತ್ಯ ಪ್ರಮಾಣ ಮುಟ್ಟಿದೊಡನೆ ಚಿಲ್ಲರ್ ಒದಗಿಸಲು ಕ್ರಮ ಕೈಗೊಳ್ಳುವ ಭರವಸೆ ಕೊಟ್ಟರು.

ಹಾಲು ಉತ್ಪಾದಕರಿಗೆ ಒದಗಿಸಲು ಪಶು ಆಹಾರವನ್ನು ಬಾಳೆಹೊನ್ನೂರು ಹಾಗೂ ಕೊಪ್ಪದಲ್ಲಿ ತಲಾ ಒಂದೊಂದು ಲೋಡ್ ನಷ್ಟು ಸ್ಟಾಕ್ ಇಟ್ಟುಕೊಳ್ಳುವುದಾಗಿ ಅವರು ಭರವಸೆಯಿತ್ತರು.

ವಿಫಲವಾಗುತ್ತಿರುವ ಕೃತಕ ಗರ್ಭಧಾರಣೆ ಬಗ್ಗೆ

ಹಸುಗಳಿಗೆ ಕೃತಕ ಗರ್ಭಧಾರಣೆ ಮಾಡಿಸಲು ಹಿಂದೆ ಬಿಎಐಎಫ್ ಸಂಸ್ಥೆಯವರು ಒಮ್ಮೆ ಇಂಜೆಕ್ಷನ್ ಮಾಡಿದರೂ ಸಾಕಾಗುತ್ತಿತ್ತು. ಆದರೆ ಈಗ ಸರ್ಕಾರಿ ಜಾನುವಾರು ಆಸ್ಪತ್ರೆಗಳಲ್ಲಿ 3-4 ಬಾರಿ ಇಂಜೆಕ್ಷನ್ ಕೊಡಿಸಿದರೂ ಗಬ್ಬವಾಗುವುದಿಲ್ಲ. ಇದರಿಂದಾಗಿ ಹಾಲು ಉತ್ಪಾದಕರಿಗೆ ಹೇಳತೀರದಷ್ಟು ತೊಂದರೆಯಾಗುತ್ತಿದೆ. ಈ ಸಮಸ್ಯೆ ನಿವಾರಣೆ ಆಗಬೇಕು ಎಂದು ರೈತರು ಹೇಳಿದಾಗ, ಹಾಜರಿದ್ದ ಪಶು ಸಂಗೋಪನೆ ಇಲಾಖೆ ಅಧಿಕಾರಿಗಳು, "ಹಾಲಿ ಘನೀಕೃತ ವೀರ್ಯವನ್ನು ಘಟಕಗಳಿಗೆ ಒಯ್ಯಲು ಸೂಕ್ತವಾದ ಚಿಕ್ಕ ಪಾತ್ರೆಗಳು (ಕಂಟೈನರ್) ಇಲ್ಲವಾಗಿದೆ. ದೊಡ್ಡದರಿಂದ ಚಿಕ್ಕದಕ್ಕೆ ವರ್ಗಾಯಿಸಿ ಸರಬರಾಜು ಮಾಡುತ್ತಿರುವುದರಿಂದ ಹೀಗಾಗಿದೆ. ಅಗತ್ಯವಾದ ಪಾತ್ರೆಗಳಿಗಾಗಿ ಇಂಡೆಂಟ್ ಮಾಡಲಾಗಿದೆ. ಅವು ಬಂದ ನಂತರ ಸುಧಾರಣೆಯಾಗುತ್ತದೆ" ಎಂದರು.

ಆತ್ಮಹತ್ಯೆಗೆ ಯತ್ನಿಸಿದಾಕೆಯ ಜೀವವುಳಿಸಿದ ವೈದ್ಯರಿಗೆ ಪೋಲೀಸರ ಕೃತಜ್ಞತೆ

ಕೊಪ್ಪ: ಶಿವಮೊಗ್ಗದಲ್ಲಿ ಉದ್ಯೋಗದಲ್ಲಿರುವ ಕಮಲಮ್ಮ ಎಂಬಾಕೆ ಸೆ. 6ರಂದು ಇಲ್ಲಿ ಮೆಟಾಸಿಡ್ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದು, ಕೊಪ್ಪ ಪೋಲೀಸರು ಆಕೆಯನ್ನು ಆಸ್ಪತ್ರೆಗೆ ದಾಖಲಿಸಿದಾಗ ವೈದ್ಯರುಗಳಾರೂ ಇಲ್ಲದಿದ್ದುದರಿಂದ ಸಬ್ ಇನ್ಸ್‌ಪೆಕ್ಟರ್ ಕರೆಯ ಮೇರೆಗೆ ಡಾ|| ಮೋಹನ್ ಶೆಟ್ಟಿ ಮತ್ತು ಡಾ|| ಶಾನಭಾಗ್ ಅವರುಗಳು ಆಸ್ಪತ್ರೆಗೆ ಧಾವಿಸಿ ಬಂದು ಆಕೆಯ ಜೀವವುಳಿಸಲು ನೆರವಾದ ಬಗ್ಗೆ ಅವರಿಬ್ಬರಿಗೂ ಪೋಲೀಸರು ಧನ್ಯವಾದ ಅರ್ಪಿಸಿದ್ದಾರೆ. ಆಕೆಯ ಮೇಲೆ ಆತ್ಮಹತ್ಯೆಗೆ ಯತ್ನಿಸಿದ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ.

ಓದುಗರ ಪತ್ರ

ಕ. ವಿ. ಮಂ. ಸಹಾಯಕ ಇಂಜಿನಿಯರ್‌ರಿಗೆ ಕೊಪ್ಪ ವಿದ್ಯುತ್ ಬಳಕೆದಾರರ ಒಂದು ಪತ್ರ

ಮಾನ್ಯರೇ,

ಕೊಪ್ಪ ಪೇಟೆಯ ಮೇಲಿನ ಪೇಟೆಯಲ್ಲಿ ಇತ್ತೀಚಿನ ದಿನಗಳಲ್ಲಿ ಕೆಲವು ಕಡೆಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ಪದೇ ಪದೇ ತಡೆಯಾಗುತ್ತಿರುವುದನ್ನು ನಾವು ಈಗಾಗಲೇ ಹಲವಾರು ಬಾರಿ ತಮ್ಮ ಗಮನಕ್ಕೆ ತಂದಿದ್ದೇವೆ. ಒಂದು ಸಾಲಿನಲ್ಲಿ ಸಮರ್ಪಕವಾಗಿ ವಿದ್ಯುತ್ ಸರಬರಾಜು ಆಗುತ್ತಿದ್ದರೆ ಮತ್ತೊಂದು ಸಾಲಿನಲ್ಲಿ ಸರಬರಾಜಿನಲ್ಲಿ ತೊಂದರೆಯುಂಟಾಗುವುದು ಸರ್ವೇ ಸಾಮಾನ್ಯವಾದ ಸಂಗತಿಯಾಗಿದೆ. ಈ ತೊಂದರೆಯನ್ನು ಕೂಡಲೆ ಸರಿಪಡಿಸಬೇಕಾಗಿ ವಿನಂತಿಸುತ್ತೇವೆ.

ವಿದ್ಯುತ್ ಸರಬರಾಜಿನಲ್ಲಿ ತೊಂದರೆಯುಂಟಾದಾಗ ನಾವು ನಿಮ್ಮ ಇಲಾಖೆಯ ಲೈನ್‌ಮನ್ (ವೈರ್‌ಮನ್)ಗಳನ್ನು ಕರೆಸಬೇಕಾದಲ್ಲಿ ಅನಿವಾರ್ಯವಾಗಿ ಸುಮಾರು 2 ಕಿ.ಮೀ. ನಡೆದು ಬಸ್‌ಸ್ಟ್ಯಾಂಡ್ ಸಮೀಪ ಹೋಗಬೇಕಾಗಿದೆಯಲ್ಲದೆ ಎಲ್ಲಾ ಸಮಯದಲ್ಲೂ ಅವರುಗಳು ಅಲ್ಲಿ ಸಿಗುವುದಿಲ್ಲ.

ಆದ್ದರಿಂದ ಕೊಪ್ಪ ಮೇಲಿನ ಪೇಟೆಯವರ ಉಪಯೋಗಕ್ಕಾಗಿ ಒಬ್ಬ ವಿದ್ಯುತ್ ವೈರ್‌ಮನ್ನರ ಸೇವೆಯನ್ನು ಒದಗಿಸಿಕೊಡಬೇಕಾಗಿ ಕೋರುತ್ತೇನೆ. ಅವರು ಕುಳಿತುಕೊಳ್ಳಲು ಸೂಕ್ತ ಸ್ಥಳದಲ್ಲಿ ವ್ಯವಸ್ಥೆ ಮಾಡಿಕೊಡಲು ನಾವು ತಯಾರಿರುತ್ತೇವೆ.

ಇದೇ ರೀತಿ ಕೆಳಗಿನ ಪೇಟೆಯಲ್ಲೂ ಬಸ್‌ಸ್ಟ್ಯಾಂಡಿನಿಂದ ಮುಂದೆ ಒಂದು ಲೈನಿನಲ್ಲಿ ವಿದ್ಯುತ್ ಸರಬರಾಜು ಇದ್ದಾಗ ಮತ್ತೊಂದು ಸಾಲಿನಲ್ಲಿ ಇಲ್ಲದಿರುವುದನ್ನು ಹಲವು ವಿದ್ಯುತ್ ಬಳಕೆದಾರರು ತಿಳಿಸಿರುತ್ತಾರೆ. ಆದ್ದರಿಂದ ಈ ವ್ಯಾಪಕವಾದ ತೊಂದರೆಯನ್ನು ಆದಷ್ಟು ಜಾಗ್ರತೆ ಸರಿಪಡಿಸಬೇಕೆಂದು ಆಶಿಸುತ್ತೇನೆ.

—ಕೊಪ್ಪ ಪೌರಹಿತ ರಕ್ಷಣಾ ಸಮಿತಿಯ ಪರವಾಗಿ,
ಎಂ. ಆರ್. ಕಣ್ಣನ್
ಗೌರವ ಕಾರ್ಯದರ್ಶಿ

ಪಶುಆಸ್ಪತ್ರೆ: ಸಂಚಾರಿವಾಹನ

ನ.ರಾ. ಪುರ: ಇಲ್ಲಿನ ಪಶು ಆಸ್ಪತ್ರೆಗೆ ಪಶ್ಚಿಮ ಘಟ್ಟಗಳ ಅಭಿವೃದ್ಧಿ ಯೋಜನೆಯಡಿ 2 ಲಕ್ಷ ರೂ. ವೆಚ್ಚದಲ್ಲಿ ಸಂಚಾರಿ ಪಶು ಚಿಕಿತ್ಸಾ ವಾಹನ ಮಂಜೂರಾಗಿರುವುದಾಗಿ ಪಶು ಸಂಗೋಪನಾ ಇಲಾಖೆ ಉಪ ನಿರ್ದೇಶಕ ಡಾ|| ಪಾರ್ಶ್ವನಾಥಯ್ಯ ತಿಳಿಸಿದ್ದಾರೆ.

ಕೊಪ್ಪ ಇಂಡಿಯನ್ ಬ್ಯಾಂಕ್ ರಜಾ ದಿನ ಭಾನುವಾರ

ಕೊಪ್ಪ: ಇಲ್ಲಿನ ಇಂಡಿಯನ್ ಬ್ಯಾಂಕ್ ಶಾಖೆಯ ವಾರದ ರಜೆಯನ್ನು ಹಾಲಿ ಇರುವ ಗುರುವಾರದ ಬದಲಾಗಿ ಭಾನುವಾರಕ್ಕೆ ಬದಲಾಯಿಸಲು (ದಿನಾಂಕ 13.10.86 ರಿಂದ ಮುಂದೆ) ನಿರ್ಧರಿಸಲಾಗಿದೆಯೆಂದು ಶಾಖಾ ಮ್ಯಾನೇಜರ್ ತಿಳಿಸಿದ್ದಾರೆ.

ಯಶಸ್ವಿ, ಆಕರ್ಷಕ ಜೇಸಿ ಸಪ್ತಾಹ

ಬಿಳಾಲುಕೊಪ್ಪ : ಇಲ್ಲಿನ ಮೇರುತಿ ಜೇಸೀಸ್ ಸಂಸ್ಥೆ ಸೆ. 9 ರಿಂದ 15 ರವರೆಗೆ ನಡೆಸಿದ ಜೇಸೀ ಸಪ್ತಾಹ ಹಳ್ಳಿಗಾಡಿನ ಜನರಿಗೆ ಹಲವು ರೀತಿಯಲ್ಲಿ ಉಪಯುಕ್ತವೂ ಉಲ್ಲಾಸಕರವೂ ಆಗಿ ಯಶಸ್ವಿಯಾಯಿತು.

ಸೆ. 9 ರಂದು ಮಣಿಪಾಲದ ಕೆ.ಎಂ.ಸಿ ಯ ನೇತ್ರ ತಜ್ಞ ಡಾ|| ಕರಿಯಪ್ಪ ಅವರ ನೇತೃತ್ವದ ವೈದ್ಯರ ತಂಡ ನಡೆಸಿಕೊಟ್ಟ ಉಚಿತ ದಂತ ಚಿಕಿತ್ಸಾ ಶಿಬಿರದಲ್ಲಿ 132 ಜನ ಚಿಕಿತ್ಸೆ ಪಡೆದು, ಆ ಪೈಕಿ 17 ಜನರಿಗೆ ಹೆಚ್ಚಿನ ಚಿಕಿತ್ಸೆಗಾಗಿ ಮಣಿಪಾಲಕ್ಕೆ ಬರಲು ಸೂಚಿಸಲಾಯಿತು. ಶ್ರೀಮತಿ ಟಿ ಒ ಥಾಮಸ್ ರವರ ನೇತೃತ್ವದಲ್ಲಿ ಶಿಬಿರ ಅಚ್ಚುಕಟ್ಟಾಗಿ ವ್ಯವಸ್ಥೆಗೊಳಿಸಲ್ಪಟ್ಟಿತ್ತು.

ಸೆ. 11 ರಂದು ಕಲ್ಲುಗುಡ್ಡೆ ಶಾಲೆಯ ಆಟದ ಮೈದಾನ ಮತ್ತು ಬಿಳಾಲುಕೊಪ್ಪ ಪಂಚಾಯ್ತಿ ಕಚೇರಿಯ ರಸ್ತೆ ಇವುಗಳನ್ನು ಶ್ರಮದಾನದಿಂದ ನಿರ್ಮಿಸಲಾಯಿತು. ಸೆ. 14 ರಂದು ದ್ವಿಚಕ್ರ ವಾಹನಗಳಿಗಾಗಿ ನಡೆದ 'ಮೇರುತಿ 150' ಮೋಟಾರ್ ರ‍್ಯಾಲಿ ಪೋಲೀಸರ ಹಾಗೂ ಸಾರ್ವಜನಿಕರ ಮತ್ತು ಸೋದರ ಸಂಘ–ಸಂಸ್ಥೆಗಳ ಉತ್ತಮ ಸಹಕಾರದಿಂದಾಗಿ ಸುಸೂತ್ರವಾಗಿ ನಡೆಯಿತು. 11 ಜನ ಸ್ಪರ್ಧಿಗಳು ಭಾಗವಹಿಸಿದ್ದು ಕೊಪ್ಪದ ಸತೀಶ್ ಶೆಟ್ಟಿ ಮೊದಲ ಸ್ಥಾನ ಪಡೆದರು.

ಅಂದು ಮಧ್ಯಾಹ್ನ ಜಯಪುರದಲ್ಲಿ 'ಮಾನವೀಯ ಸಂಬಂಧಗಳು' ಎಂಬ ವಿಷಯವಾಗಿ ಕೊಗ್ರೆ ಕಾರ್ಪೊರೇಷನ್ ಬ್ಯಾಂಕ್ ಮ್ಯಾನೇಜರ್ ಹಾಗೂ ಜೇಸೀ ಅಧ್ಯಕ್ಷ ಪಿ. ಎಸ್. ಭಟ್ ವಿಚಾರ ಸಂಕಿರಣ ನಡೆಸಿದರು.

ಇವಲ್ಲದೆ ಪ್ರೌಢಶಾಲಾ ವಿದ್ಯಾರ್ಥಿಗಳು ಮಹಿಳೆಯರು, ಪುರುಷರು, ವೃದ್ಧರು ಮುಂತಾದವರಿಗಾಗಿ ವಿವಿಧ ಸ್ಪರ್ಧೆಗಳು, ಪ್ರತಿಭಾ ಪ್ರದರ್ಶನ ಹಾಗೂ ಪ್ರತಿದಿನ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

ಸೆ. 9 ರಂದು ಶಿರೀಷ್ ಗುರ್ಜರ್ ಸಪ್ತಾಹವನ್ನು ಉದ್ಘಾಟಿಸಿದರು. ಬಿ. ಕೆ. ವೆಂಕಪ್ಪಯ್ಯ ಮತ್ತು ಕೌಳಿ ಶ್ರೀನಿವಾಸ್ ಮುಖ್ಯ ಅತಿಥಿಗಳಾಗಿದ್ದರು.

ಸೆ. 15 ರಂದು ನಡೆದ ಮುಕ್ತಾಯ ಸಮಾರಂಭದಲ್ಲಿ ಅಚ್ಚುತಪ್ಪೆ ಮತ್ತು ಕೆ.ಜಿ. ಕೃಷ್ಣಯ್ಯಗೌಡ ಮುಖ್ಯ ಅತಿಥಿಗಳಾಗಿದ್ದರು ಕೊಪ್ಪ ತಹಸೀಲ್ದಾರ್ ಶ್ರೀನಿವಾಸ್ ಬಹುಮಾನ ವಿತರಿಸಿದರು.

ಮುಂದಿನ ವರ್ಷ ಪರ್ವತಾರೋಹಣ ಸ್ಪರ್ಧೆ ?

ಈ ಪ್ರಾಂತ್ಯದ ಶಿಖರಗಳಲ್ಲೇ ಅತ್ಯಂತ ಎತ್ತರವಾದುದೆನ್ನಲಾದ ಮೇರುತಿ ಪರ್ವತವನ್ನು ಏರುವ "ಪರ್ವತಾರೋಹಣ ಸ್ಪರ್ಧೆ" ಯನ್ನು ಮುಂದಿನ ವರ್ಷದ ಜೇಸೀ ಸಪ್ತಾಹದಲ್ಲಿ ಏರ್ಪಡಿಸಲು ಸಂಸ್ಥೆ ಯೋಚಿಸಿರುವುದಾಗಿ ತಿಳಿದು ಬಂದಿದೆ.

ಕುಟುಂಬ ಯೋಜನೆ ಶಿಬಿರ

ಕೊಪ್ಪ: ಸಾರ್ವಜನಿಕ ಶಿಕ್ಷಣ ಇಲಾಖೆ (ಪ್ರಾಥಮಿಕ ಶಿಕ್ಷಣ) ಮತ್ತು ಸಮಗ್ರ ಶಿಶು ಕಲ್ಯಾಣ ಇಲಾಖೆಗಳ ಸಂಯುಕ್ತ ಆಶ್ರಯದಲ್ಲಿ ಕೊಪ್ಪ ಲಯನ್ಸ್ ಕ್ಲಬ್ ಸಹಯೋಗದೊಂದಿಗೆ ಸೆ. 19ರಂದು ಇಲ್ಲಿನ ಜನರಲ್ ಆಸ್ಪತ್ರೆಯಲ್ಲಿ ಏರ್ಪಡಿಸಲಾಗಿದ್ದ ಸಂತಾನ ಹರಣ ಶಸ್ತ್ರ ಚಿಕಿತ್ಸಾ ಶಿಬಿರದಲ್ಲಿ 47 ಮಹಿಳೆಯರಿಗೆ ಸಂತಾನ ಹರಣ ಶಸ್ತ್ರ ಚಿಕಿತ್ಸೆ ನಡೆಸಲಾಗಿದೆ. ಸಹಕರಿಸಿದ ಪ್ರಾಥಮಿಕ ಶಿಕ್ಷಕರಿಗೂ ಮತ್ತು ಅಂಗನವಾಡಿ ಕಾರ್ಯಕರ್ತೆಯರಿಗೂ ಅಧಿಕಾರಿಗಳು ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

'ಪೋಲೀಸ್ ದೌರ್ಜನ್ಯ' ಪ್ರತಿಭಟನೆ

ಹರಿಹರಪುರ : ಇಲ್ಲಿನ ಪೋಲೀಸರು ಕಳೆದ ಒಂದು ವರ್ಷದಿಂದಲೂ ನಿರಪರಾಧಿಗಳಿಗೆ ವೃಥಾ ಕಿರುಕುಳ ಕೊಡುತ್ತಿದ್ದಾರೆಂದು ಆಪಾದಿಸಿರುವ ಸ್ಥಳೀಯ ಬಿ.ಜೆ.ಪಿ ಘಟಕವು ಈ ಬಗ್ಗೆ ಮೇಲಧಿಕಾರಿಗಳಲ್ಲಿ ಹಲವು ಬಾರಿ ದೂರಿದ್ದಾಗ್ಯೂ ಯಾವುದೇ ಪರಿಣಾಮವಾಗಿಲ್ಲದಿರುವುದರಿಂದ ಸೆ. 28ರಂದು ಪ್ರತಿಭಟನೆ ನಡೆಸಲು ನಿರ್ಧರಿಸಿದೆ. ಬಿ.ಜೆ.ಪಿ. ಶಾಸಕರಾದ ಕರಂಬಳ್ಳಿ ಸಂಜೀವಶೆಟ್ಟಿ ಹಾಗೂ ಯಡಿಯೂರಪ್ಪ ಅವರುಗಳು ಈ ಪ್ರತಿಭಟನೆಯಲ್ಲಿ ಪಾಲ್ಗೊಳ್ಳುವರೆಂದು ತಾ|| ಬಿಜೆಪಿ ಅಧ್ಯಕ್ಷ ಬಿ. ಎಂ. ರಘುನಾಥ್ ತಿಳಿಸಿದ್ದಾರೆ.

ಹೇರೂರು - ದೂಬಳದ ಕೆಲವು ಸಮಸ್ಯೆಗಳು

(ವರದಿ: ಎಚ್. ವಿ. ಶ್ರೀವತ್ಸ)

ಹೇರೂರು: ದೂಬಳ–ಬಸರಿಕಟ್ಟೆ ರಸ್ತೆ ದುರಸ್ತಿ ಕಾರ್ಯ, ಪೂರ್ಣವಾಗಿ ವಾಹನ ಸೌಕರ್ಯದ ಏರ್ಪಾಡು ಆಗಲಿದೆ ಎಂಬ ಸುದ್ದಿ ಹುಟ್ಟಿದ್ದು ಬೇಗಾನೆ ರಾಮಯ್ಯನವರ ಕಾಲದಲ್ಲಿ. ಅಲ್ಲಿಂದ ಈವರೆವಿಗೂ ಸುದ್ದಿ ಗಾಳಿಯಲ್ಲಿ ಗುದ್ದಾಡುತ್ತಲೇ ಇದೆ. ಕಾರ್ಯರೂಪಕ್ಕೆ ಬರಲಿಲ್ಲ.

ರಿಪೇರಿ ವೈಖರಿ: ಅಂದು-ಇಂದು

ದೂಬಳ ಕೈಮರದಿಂದ ದೂಬಳ ಎಸ್ಟೇಟ್ ರಸ್ತೆಯನ್ನು ಅನೇಕ ವರ್ಷಗಳಿಂದ ಎಸ್ಟೇಟಿನವರು ಸ್ವತಃ ರಿಪೇರಿ ಮಾಡಿಸುತ್ತಿದ್ದರು. ಮಾಡುತ್ತಿದ್ದ ರಸ್ತೆ ದುರಸ್ತಿ ಕಾರ್ಯ ಚೊಕ್ಕಟವಾಗಿರುತ್ತಿತ್ತು.

ಆದರೆ ಕಳೆದ ಸಾಲಿನಿಂದ ಈ ರಸ್ತೆ ಲೋಕೋಪಯೋಗಿ ಇಲಾಖೆಗೆ ಸೇರಿಸಲ್ಪಟ್ಟಿದ್ದು ಈ ಇಲಾಖೆಯ ವತಿಯಿಂದ ಕಂಟ್ರಾಕ್ಟ್ ವಹಿಸಿಕೊಂಡವರು ರಿಪೇರಿ ಮಾಡಿದ್ದಾರೆ. ಈ ರಿಪೇರಿ ಕಾರ್ಯ ಎಷ್ಟರಮಟ್ಟಿಗೆ ವ್ಯವಸ್ಥಿತವಾಗಿದೆ ಎನ್ನುವುದಕ್ಕೆ, ರಸ್ತೆಯ ಉದ್ದಕ್ಕೂ ಬಿದ್ದಿರುವ ರಾಶಿಕಲ್ಲುಗಳು, ಕೈಚರಂಡಿ ಇಲ್ಲದೇ ಆದ ಹೊಂಡಗಳು ಸಂಕ್ಷಿಪ್ತವಾಗಿ ಹೇಳುತ್ತವೆ. ಈ ಬಗ್ಗೆ ದಿನವೂ ಶಾಲೆಗೆ ಹೋಗುವ ಮಕ್ಕಳೂ ಸಹ ಪಟಗುಟ್ಟುತ್ತಾರೆ.

ವಿದ್ಯುತ್ ಕಂಬಗಳು ವಾಲಿವೆ

ದೂಬಳದ ಸುತ್ತಲಿರುವ ಹುಲಸೆ, ತೋಟದಮನೆ– ಈ ಸ್ಥಳಗಳಲ್ಲಿ ಹಳೆಯದಾದ ವಿದ್ಯುತ್ ಕಂಬಗಳು ವಾಲಿಕೊಂಡಿದ್ದು, ಯಾವಾಗ ಬೇಕಾದರೂ ದಿಢೀರನೆ ಬಿದ್ದು ಅಪಾಯ ಸಂಭವಿಸಬಹುದು. ಸಂಬಂಧಿಸಿದ ಇಲಾಖೆಯವರು ಕೂಡಲೇ ಸೂಕ್ತ ಬದಲಾವಣೆಗೆ ವ್ಯವಸ್ಥೆ ಮಾಡುವುದು ಒಳ್ಳೆಯದು.

ದೂಬಳ, ಸುತ್ತಿನಗದ್ದೆ, ಹುಲಸೆ ಮುಂತಾದ ಮನೆಗಳಿಗೆ ಭೇಟಿ ನೀಡಬೇಕಾದ ಗದ್ದೆಮನೆ – ಬಸರಿಕಟ್ಟೆ ವಲಯದ ಮಿಡ್‌ವೈಫ್ ಕಾಣೆಯಾಗಿ ಮೂರು ವರ್ಷಗಳು ಕಳೆದವು. (ಇದು ಅಂದಾಜು ಲೆಖ್ಖ. ಸರಿ ಲೆಖ್ಖದಲ್ಲಿ ಜಾಸ್ತಿ ಆಗಿದೆ.) ಗ್ರಾಮಾಂತರ ಪ್ರದೇಶದ ಗರ್ಭಿಣಿ ಸ್ತ್ರೀಯರಿಗೆ, ಮಕ್ಕಳಿಗೆ ನೆರವಾಗಬೇಕಾದ ಮಿಡ್‌ವೈಫ್ ಗೈರು ಹಾಜರಿ ಬಗ್ಗೆ ಈ ಹಿಂದೆ ಸಂಬಂಧಪಟ್ಟ ಅಧಿಕಾರಿಗಳಿಗೆ ಬರೆದಾಗಿದೆ. 'ಲಂಕೇಶ್ ಪತ್ರಿಕೆ'ಯಲ್ಲಿ ಈ ಬಗ್ಗೆ ವರದಿ ಬಂದಿದೆ. ಸಂಬಳ ತೆಗೆದುಕೊಂಡೂ ಕೆಲಸ ಮಾಡದಿರುವರೆ? ಅಥವಾ ಈ ವಲಯಕ್ಕೆ ಸಂಬಂಧಿಸಿ ಯಾರೂ ನೇಮಕವಾಗಿಲ್ಲವೆ? ಗದ್ದೆಮನೆ–ಬಸರಿಕಟ್ಟೆ ವಲಯ ರದ್ದು ಮಾಡಿ ಹೇರೂರಿಗೆ ಹೊಸತಾಗಿ ಒಬ್ಬರನ್ನು ನೇಮಕ ಮಾಡಿದರೂ ಅಡ್ಡಿಯಿಲ್ಲವೆಂದು ಜನರ ಅಭಿಪ್ರಾಯ.

ಈ ಎಲ್ಲಾ ಸಮಸ್ಯೆಗಳಿಗೆ ಸಂಬಂಧಪಟ್ಟ ಇಲಾಖೆಯವರು ಗಮನ ಹರಿಸುವರಾಗಿ ಜನತೆ ನಂಬಿ ನಿರೀಕ್ಷಿಸುತ್ತಾರೆ.

"ವೀಐಪಿಗಳ ದುಬಾರಿ ತೀರ್ಥಯಾತ್ರೆಗಳು". ಮುಂದಿನ ಸಂಚಿಕೆಯಲ್ಲಿ ಮುಂದುವರಿಯುವುದು. —ಸಂ.

ವೆಂಕಟಸ್ವಾಮಿ ವರದಿ ಪ್ರತಿಭಟಿಸಿ ಸೆ. 19ರಂದು

ಕೊಪ್ಪ ಬಂದ್, ಮೆರವಣಿಗೆ

ಕೊಪ್ಪ : ವೆಂಕಟಸ್ವಾಮಿ ವರದಿಯನ್ನು ವಿರೋಧಿಸಿ ಸೆ. 19 ರಂದು ಇಲ್ಲಿ ಬಂದ್ ಮತ್ತು ಬೃಹತ್ ಮೆರವಣಿಗೆ ನಡೆದವು. ನಂತರ ಒಕ್ಕಲಿಗರ ಸಂಘದ ಉಪಾಧ್ಯಕ್ಷ ಬಿ. ಜಿ. ಚಿದಂಬರ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಬಿ. ಜಿ. ಚಂದ್ರಶೇಖರ್, ಬಾಳೆಮನೆ ಸುಬ್ಬಣ್ಣ, ಕಳಸಪ್ಪ, ಎಂ. ಪಿ. ಅಶೋಕ್, ಪದ್ಮಪ್ಪ, ಕಾಡಪ್ಪಗೌಡ ಮುಂತಾದವರು ಮಾತನಾಡಿದರು. ವೆಂಕಟಸ್ವಾಮಿ ವರದಿಯನ್ನು ತಿರಸ್ಕರಿಸಿ, ಹಾವನೂರ್ ವರದಿಯನ್ನೇ ಮುಂದುವರಿಸಬೇಕೆಂದು ಡಿ. ನಾಗರಾಜ್ ಮಂಡಿಸಿದ ನಿರ್ಣಯವನ್ನು ಸಭೆ ಅಂಗೀಕರಿಸಿ, ಅನಂತರ ಅದನ್ನು ತಹಸೀಲ್ದಾರರಿಗೆ ಸಲ್ಲಿಸಲಾಯಿತು.

ಬಡ ರೈತರ ಭೂಮಿಗೆ ಹಕ್ಕು ಪತ್ರ ಪಡೆಯಲು ಹೋರಾಟಕ್ಕೆ ನಿರ್ಧಾರ

ನರಸಿಂಹರಾಜಪುರ:

ಸ್ಥಳೀಯ ಬಡ ರೈತರು ಸಾಗುವಳಿ ಮಾಡುತ್ತಿರುವ ಭೂಮಿಗಳಿಗೆ ಹಕ್ಕು ಪತ್ರಗಳನ್ನು ಪಡೆಯುವ ಸಲುವಾಗಿ ಬೃಹತ್ ಹೋರಾಟವನ್ನು ಸಂಘಟಿಸಲು ಇಲ್ಲಿನ ಬಿ. ಎಚ್. ಕೈಮರದ ಸಿ.ಪಿ.ಐ. ಶಾಖೆ ನಿರ್ಧರಿಸಿದೆ. ಈ ಶಾಖೆಯನ್ನು ಇತ್ತೀಚೆಗೆ ಜಿಲ್ಲಾ ಕಾರ್ಯದರ್ಶಿ ಬಿ.ಕೆ. ಸುಂದರೇಶ್ ಉದ್ಘಾಟಿಸಿದರು

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: ಸಿರಿಮನೆ ನಾಗರಾಜ್, ಅಚ್ಚು: ದೀಪಟಿಗೆ ಅಚ್ಚುಕೂಟ, ಕೊಪ್ಪ

ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

ರಿಜಿಸ್ಟರ್ಡ್ ನಂ. ಆರ್‌ಎನ್‌ಎಸ್ -19

5ನೇ ವರ್ಷ 5ನೇ ಸಂಚಿಕೆ ಕೊಪ್ಪ 21-9-1986 ಭಾನುವಾರ ಬೆಲೆ 20 ಪೈಸೆ

ಸಾಕ್ಷರತಾ ದಿನಾಚರಣೆ

ಕೊಪ್ಪ : ಅಂತರರಾಷ್ಟ್ರೀಯ ಸಾಕ್ಷರತಾ ದಿನಾಚರಣೆ ಮತ್ತು ಸಾಕ್ಷರತಾ ಸಪ್ತಾಹ ಸೆ. 14 ರಂದು ಕ್ಷೇತ್ರಾಭಿವೃದ್ಧಿ ಅಧಿಕಾರಿ ಪಿ. ಬಾಲಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಬಾಲವಿಕಾಸ ಯೋಜನಾಧಿಕಾರಿ ಸತ್ಯನಾರಾಯಣ ಮುಖ್ಯ ಅತಿಥಿಯಾಗಿದ್ದರು. ತಾ॥ ವ. ಶಿ ಮೇಲ್ವಿಚಾರಕ ಬಿ. ರಂಗಸ್ವಾಮಿ ಸ್ವಾಗತಿಸಿ, ಕೆ. ಎ. ಶಂಕರಪ್ಪ ವಂದಿಸಿದರು.

ಏಲಕ್ಕಿ ಮಾರುಕಟ್ಟೆ ನಿಯಂತ್ರಣಕ್ಕಾಗಿ ಮಂಡಳಿಯಿಂದಲೇ ಸಕಲೇಶಪುರ, ಮಡಿಕೇರಿಗಳಲ್ಲಿ ಹರಾಜು ಕೇಂದ್ರ

ಸಕಲೇಶಪುರ: ಇಲ್ಲಿನ ಏಲಕ್ಕಿ ಮಂಡಳಿ ಹರಾಜು ಕೇಂದ್ರದಲ್ಲಿ ಈ ವರ್ಷದ ಮೊಟ್ಟ ಮೊದಲ ಹರಾಜು, ಸೆ. 15ರಂದು ಮಂಡಳಿಯ ಸದಸ್ಯರಾದ ಡಾ॥ ಎ. ಎಲ್. ಜಯದೇವಪ್ಪ ಜ್ಯೋತಿ ಬೆಳಗಿಸುವುದರೊಂದಿಗೆ ಹಾಗೂ ಮಾಜಿ ಸದಸ್ಯ ಗಣಪಯ್ಯನವರ ಉದ್ಘಾಟನೆಯೊಂದಿಗೆ ಆರಂಭವಾಯಿತು.

ಭಾರತದ ಆಂತರಿಕ ಮಾರುಕಟ್ಟೆಯಲ್ಲೇ ವಿಶೇಷವಾಗಿ ಬಳಕೆಯಾಗುವ ಕರ್ನಾಟಕದ ಏಲಕ್ಕಿಗೆ ಮಂಡಳಿಯು ವ್ಯಾಪಕ ಪ್ರಚಾರ ಕೊಡಬೇಕು. ಮಿಠಾಯಿ, ಬ್ರೆಡ್, ಐಸ್ ಕ್ರೀಂ, ತಂಪು ಪಾನೀಯಗಳಿಗಾಗಿ ಏಲಕ್ಕಿ ಬಳಸುವ ಗ್ರಾಹಕರಿಗೆ ಹೆಚ್ಚಿನ ಉತ್ತೇಜನ ನೀಡಬೇಕು ಎಂದು ಗಣಪಯ್ಯ ಆಗ್ರಹಿಸಿದರು.

ಮೊದಲ ದಿನದ ಹರಾಜಿನಲ್ಲಿ ಏಲಕ್ಕಿ ಕಿಲೋಗೆ ಗರಿಷ್ಠ 240 ರೂ. ಗಳೂ, ಸರಾಸರಿ 150 ರೂ. ಗಳೂ ಬಂದುವು.

ಮಾರುಕಟ್ಟೆ ನಿಯಂತ್ರಣಕ್ಕಾಗಿ 2 ಹರಾಜು ಕೇಂದ್ರಗಳು

ಏಲಕ್ಕಿ ಮಾರುಕಟ್ಟೆಯನ್ನು ನಿಯಂತ್ರಿಸಿ, ಏಲಕ್ಕಿಗೆ ಉತ್ತಮ ಬೆಲೆ ದೊರಕಿಸಿ ಕೊಡುವ ಸಲುವಾಗಿ ಮಂಡಳಿಯು ರಾಜ್ಯದ ಪ್ರಮುಖ ಏಲಕ್ಕಿ ಮಾರುಕಟ್ಟೆಗಳಾದ ಸಕಲೇಶಪುರ ಮತ್ತು ಮಡಿಕೇರಿಗಳಲ್ಲಿ ಹರಾಜು ಕೇಂದ್ರಗಳನ್ನು ಆರಂಭಿಸಿದೆ. ಸಕಲೇಶಪುರದಲ್ಲಿ ಪ್ರತಿ ಸೋಮವಾರ ಹಾಗೂ ಮಡಿಕೇರಿಯಲ್ಲಿ ಪ್ರತಿ ಬುಧವಾರ ನಡೆಯುವ ಈ ಹರಾಜುಗಳಲ್ಲಿ ಮಂಗಳೂರು, ಬೆಂಗಳೂರು ಮತ್ತಿತರ ಕೇಂದ್ರಗಳ ವ್ಯಾಪಾರಸ್ಥರು ಮತ್ತು ರಫ್ತುದಾರರು ಭಾಗವಹಿಸುತ್ತಾರೆ.

ಕೇವಲ ಶೇ. 1ರಷ್ಟು ಕಡಿಮೆ ಕಮಿಶನ್‌ನಲ್ಲಿ ಬೆಳೆಗಾರರ ಏಲಕ್ಕಿಯನ್ನು ಈ ಕೇಂದ್ರಗಳಲ್ಲಿ ಹರಾಜು ಮಾಡಿಕೊಡುವುದಲ್ಲದೆ, ಪೂರ್ಣ ಕ್ರಯವನ್ನು ಅಂದಾ ದಿನವೇ ಬೆಳೆಗಾರರಿಗೆ ಕೊಡಲೂ ಏರ್ಪಾಡು ಮಾಡಲಾಗಿದೆ. ಅಲ್ಲದೆ ವಾರದ ಎಲ್ಲಾ ದಿನಗಳಲ್ಲೂ ಏಲಕ್ಕಿಯನ್ನು ಸ್ವೀಕರಿಸಲಾಗುತ್ತಿದೆ.

ಬೆಳೆಗಾರರು ಮಧ್ಯವರ್ತಿಗಳ ಮೊರೆ ಹೋಗದೆ ಈ ಹರಾಜು ಕೇಂದ್ರಗಳ ಸದುಪಯೋಗ ಪಡೆದುಕೊಳ್ಳಬೇಕೆಂದು ಮಂಡಳಿ ಬೆಳೆಗಾರರನ್ನು ವಿನಂತಿಸಿದೆ.

ಉತ್ತಮ ಬೆಲೆ

ಏಲಕ್ಕಿಯ ಧಾರಣೆ ಈಗ ಬಹಳವಾಗಿ ಉತ್ತಮಗೊಂಡಿದ್ದು, ನಮ್ಮ ಮಲೆನಾಡಿನ ಏಲಕ್ಕಿಗ 150ರಿಂದ 180 ರೂ. ಗಳವರೆಗೂ ದೊರೆಯುತ್ತಿರುವುದಾಗಿ, ಏಲಕ್ಕಿ ಮಾರಾಟ ಮಾಡಿ ಬಂದ ಕೆಲ ಬೆಳೆಗಾರರು 'ಮುಂಜಾವು'ಗೆ ತಿಳಿಸಿದ್ದಾರೆ ಈ ವಿಚಾರದ ಮಾಹಿತಿಯಿಲ್ಲದ ಬೆಳೆಗಾರರಿಂದ ಸ್ಥಳೀಯ ಮಧ್ಯವರ್ತಿಗಳು ಕೇವಲ 90-100 ರೂ. ಗಳಿಗೆ ಏಲಕ್ಕಿ ಕೊಳ್ಳುತ್ತಿರುವುದಾಗಿಯೂ ತಿಳಿದುಬಂದಿದೆ.

ತಕ್ಷಣದಿಂದ 2 ಹೊತ್ತೂ ಹಾಲಿನ ವ್ಯಾನ್ ಓಡಾಟ, ಪ್ರತಿ ಬ್ಯಾಂಕಿನಿಂದ ತಲಾ 10 ಹಸುವಿಗೆ ಸಾಲ ನೀಡಿಕೆ

— ಬಾಳೆಹೊನ್ನೂರು ಸಭೆಯಲ್ಲಿ ಒಡಂಬಡಿಕೆ

ಬಾಳೆಹೊನ್ನೂರು : ಇಲ್ಲಿ ಸೆ. 19 ರಂದು ಹೈನುಗಾರಿಕೆ ಅಭಿವೃದ್ಧಿ ಬಗ್ಗೆ ನಡೆದ ವಿಶೇಷ ಸಭೆಯಲ್ಲಿ ಅತಿ ಮುಖ್ಯವಾದ ಕೆಲವು ತೀರ್ಮಾನಗಳನ್ನು ತೆಗೆದುಕೊಳ್ಳಲಾಗಿದೆ.

ಈ ಸಭೆಯಲ್ಲಿ ಡೈರಿ ನಿಗಮದ ಹಿರಿಯ ಅಧಿಕಾರಿಗಳು, ಜಿಲ್ಲಾಧಿಕಾರಿ ಮತ್ತು ವಿಶೇಷ ಜಿಲ್ಲಾಧಿಕಾರಿಗಳು, ಜಿಲ್ಲೆಯ ಲೀಡ್ ಬ್ಯಾಂಕ್ ಆದ ಕಾರ್ಪೊರೇಷನ್ ಬ್ಯಾಂಕಿನ ಜಿಲ್ಲಾ ಮ್ಯಾನೇಜರ್ ನಾಗೇಶರಾವ್, ಚಿ. ಕೊ. ಗ್ರಾಮೀಣ ಬ್ಯಾಂಕ್ ಅಧ್ಯಕ್ಷ ಅಚ್ಯುತ ಪೈ, ಇತರ ಬ್ಯಾಂಕ್‌ಗಳ ಅಧಿಕಾರಿಗಳು ಪಶು ವೈದ್ಯಾಧಿಕಾರಿಗಳು ಹಾಲು ಉತ್ಪಾದಕರುಗಳು ಭಾಗವಹಿಸಿದ್ದರು.

ಎರಡು ಹೊತ್ತೂ ಸಂಗ್ರಹಣೆ

ಈ ಹಿಂದೆಯೇ ವರದಿ ಮಾಡಿರುವಂತೆ, ಜಯಪುರ, ಕೊಪ್ಪ, ಹರಿಹರಪುರ, ಬಿಳಾಲುಕೊಪ್ಪ, ಬಸರಿಕಟ್ಟೆ, ಬಾಳೆಹೊನ್ನೂರು ಮಾರ್ಗವಾಗಿ ಹಾಸನಕ್ಕೆ ಪ್ರತಿದಿನ ಎರಡು ಹೊತ್ತೂ ಹಾಲನ್ನು ಸಂಗ್ರಹಿಸಿ ಒಯ್ಯಲು ಸೆ. 22ರಿಂದಲೇ ವಾಹನವನ್ನು ಬಿಡಲಾಗುವುದೆಂದು ಡೈರಿ ಅಧಿಕಾರಿಗಳು ತಿಳಿಸಿದರು.

ಇದಕ್ಕೆ ಪ್ರತಿಯಾಗಿ ರೈತರು ಆದಷ್ಟೂ ಹೆಚ್ಚು ಹಾಲನ್ನು ಡೈರಿಗೇ ನೀಡಬೇಕು ಹಾಗೂ ಹೆಚ್ಚೆಚ್ಚು ಉತ್ತಮ ತಳಿಯ ಹಸುಗಳನ್ನು ಸಾಕಿ ಹಾಲು ಉತ್ಪಾದನೆ ಅಧಿಕಗೊಳಿಸಬೇಕು ಎಂದು ಅವರು ಮನವಿ ಮಾಡಿದರು.

ಬ್ಯಾಂಕ್ ಸಾಲ ವ್ಯವಸ್ಥೆ

ಈ ನಿಟ್ಟಿನಲ್ಲಿ ಎಲ್ಲಾ ಬ್ಯಾಂಕುಗಳೂ ಹಾಲು ಉತ್ಪಾದಕರಿಂದ ಸೆ. 30ರೊಳಗಾಗಿ ಅರ್ಜಿಗಳನ್ನು ಪಡೆದು, ಅವನ್ನು ಪರಿಶೀಲಿಸಿ ಅಕ್ಟೋಬರ್ 15ರೊಳಗಾಗಿ ಪ್ರತಿ ಬ್ಯಾಂಕೂ ಕನಿಷ್ಠ ಪಕ್ಷ ತಲಾ 10 ಮಿಶ್ರ ತಳಿ ಹಸುಗಳಿಗಾದರೂ ಸಾಲವನ್ನು ವಿತರಿಸಬೇಕೆಂದು ಜಿಲ್ಲಾಧಿಕಾರಿಗಳು ಸೂಚಿಸಿದ ಮೇರೆಗೆ ಎಲ್ಲಾ ಬ್ಯಾಂಕುಗಳಿಗೂ ಆದೇಶ ನೀಡಲಾಯಿತು. ಆಯಾ ಸಹಕಾರ ಸಂಘಗಳೂ ಸಹ ಅರ್ಜಿದಾರರ ಹೆಸರುಗಳನ್ನು ಶಿಫಾರ್ಸು ಮಾಡಲು ಕೋರಲಾಯಿತು. ಅರ್ಜಿ ಪಡೆದು ಬ್ಯಾಂಕಿಗೆ ಸಲ್ಲಿಸುವ ಜವಾಬ್ದಾರಿಯನ್ನು ಆಯಾ ತಾಲ್ಲೂಕಿನ ಬಿ. ಡಿ. ಓ.ಗಳಿಗೆ ವಹಿಸಲಾಯಿತು.

ಇನ್ನೂ ರಿಜಿಸ್ಟರ್ ಆಗದಿರುವ ಹಾಲು ಉತ್ಪಾದಕರ ಸಂಘಗಳನ್ನು ರಿಜಿಸ್ಟರ್ ಮಾಡುವ ಬಗ್ಗೆ ಇರುವ ಅಡ್ಡಿಗಳನ್ನು ನಿವಾರಿಸಿ ಸೆ. 30ರೊಳಗಾಗಿ ಕಾದಿರುವ ಎಲ್ಲಾ ಸಂಘಗಳನ್ನೂ ರಿಜಿಸ್ಟರ್ ಮಾಡಲು ಹಾಗೂ ಇದಕ್ಕೆ ಬೇಕಾದ ದಾಖಲೆಗಳನ್ನು ಒದಗಿಸಲೂ ಸಹ ಸಂಬಂಧಪಟ್ಟವರಿಗೆ ಸೂಚಿಸಲಾಯಿತು.

ಶೈತ್ಯೀಕರಣ ಘಟಕ

ಬಾಳೆಹೊನ್ನೂರಿನಲ್ಲಿ ಹಾಲಿ ಚಿಲ್ಲರ್ (ಶೈ॥ ಯಂತ್ರ) ಇಲ್ಲವಾಗಿದ್ದು, ಅದನ್ನು ಒದಗಿಸಲು ಕನಿಷ್ಠ ಪಕ್ಷ 500 ಲೀಟರ್ ನಷ್ಟಾದರೂ ಹಾಲು ಸಂಗ್ರಹವಾಗಬೇಕಾಗಿದೆ. ಸದ್ಯ ಹಾಲಿನ ಸಂಗ್ರಹಣೆ 200 ಲೀ. ನಷ್ಟಕ್ಕೆ ಕುಸಿದಿದೆ ಎಂದು ಅಧಿಕಾರಿಗಳು ತಿಳಿಸಿ, ಹಾಲು ಸಂಗ್ರಹ ಅಗತ್ಯ ಪ್ರಮಾಣ ಮುಟ್ಟಿದೊಡನೆ ಚಿಲ್ಲರ್ ಒದಗಿಸಲು ಕ್ರಮ ಕೈಗೊಳ್ಳುವ ಭರವಸೆ ಕೊಟ್ಟರು

ಹಾಲು ಉತ್ಪಾದಕರಿಗೆ ಒದಗಿಸಲು ಪಶು ಆಹಾರವನ್ನು ಬಾಳೆಹೊನ್ನೂರು ಹಾಗೂ ಕೊಪ್ಪದಲ್ಲಿ ತಲಾ ಒದೊಂದು ಲೋಡ್ 'ನಷ್ಟ ಸ್ಟಾಕ್' ಇಟ್ಟುಕೊಳ್ಳುವುದಾಗಿ ಅವರು ಭರವಸೆಯಿತ್ತರು.

ವಿಫಲವಾಗುತ್ತಿರುವ ಕೃತಕ ಗರ್ಭಧಾರಣೆ ಬಗ್ಗೆ

ಹಸುಗಳಿಗೆ ಕೃತಕ ಗರ್ಭಧಾರಣೆ ಮಾಡಿಸಲು ಹಿಂದೆ ಬಿಎಐಎಫ್ ಸಂಸ್ಥೆಯವರು ಒಮ್ಮೆ ಇಂಜೆಕ್ಷನ್ ಮಾಡಿದರೂ ಸಾಕಾಗುತ್ತಿತ್ತು. ಆದರೆ ಈಗ ಸರ್ಕಾರಿ ಜಾನುವಾರು ಆಸ್ಪತ್ರೆಗಳಲ್ಲಿ 3-4 ಬಾರಿ ಇಂಜೆಕ್ಷನ್ ಕೊಡಿಸಿದರೂ ಗಬ್ಬವಾಗುವುದಿಲ್ಲ. ಇದರಿಂದಾಗಿ ಹಾಲು ಉತ್ಪಾದಕರಿಗೆ ಹೇಳತೀರದಷ್ಟು ತೊಂದರೆಯಾಗುತ್ತಿದೆ. ಈ ಸಮಸ್ಯೆ ನಿವಾರಣೆ ಆಗಬೇಕು ಎಂದು ರೈತರು ಹೇಳಿದಾಗ, ಹಾಜರಿದ್ದ ಪಶು ಸಂಗೋಪನೆ ಇಲಾಖೆ ಅಧಿಕಾರಿಗಳು, "ಹಾಲಿ ಘನೀಕೃತ ವೀರ್ಯವನ್ನು ಘಟಕಗಳಿಗೆ ಒಯ್ಯಲು ಸೂಕ್ತವಾದ ಚಿಕ್ಕ ಪಾತ್ರೆಗಳು (ಕಂಟೈನರ್) ಇಲ್ಲವಾಗಿದೆ. ದೊಡ್ಡದರಿಂದ ಚಿಕ್ಕದಕ್ಕೆ ವರ್ಗಾಯಿಸಿ ಸರಬರಾಜು ಮಾಡುತ್ತಿರುವುದರಿಂದ ಹೀಗಾಗಿದೆ. ಅಗತ್ಯವಾದ ಪಾತ್ರೆಗಳಿಗಾಗಿ ಇಂಡೆಂಟ್ ಮಾಡಲಾಗಿದೆ ಅವು ಬಂದ ನಂತರ ಸುಧಾರಣೆಯಾಗುತ್ತದೆ" ಎಂದರು.

ಆತ್ಮಹತ್ಯೆಗೆ ಯತ್ನಿಸಿದಾಕೆಯ ಜೀವವುಳಿಸಿದ ವೈದ್ಯರಿಗೆ ಪೋಲೀಸರ ಕೃತಜ್ಞತೆ

ಕೊಪ್ಪ: ಶಿವಮೊಗ್ಗದಲ್ಲಿ ಉದ್ಯೋಗದಲ್ಲಿರುವ ಕಮಲಮ್ಮ ಎಂಬಾಕೆ ಸೆ. 6ರಂದು ಇಲ್ಲಿ ಮೆಟಾಸಿಡ್ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದು, ಕೊಪ್ಪ ಪೋಲೀಸರು ಆಕೆಯನ್ನು ಆಸ್ಪತ್ರೆಗೆ ದಾಖಲಿಸಿದಾಗ ವೈದ್ಯರುಗಳಾರೂ ಇಲ್ಲದಿದ್ದುದರಿಂದ ಸಬ್ ಇನ್ಸ್ಪೆಕ್ಟರ್ ಕರೆಯ ಮೇರೆಗೆ ಡಾ॥ ಮೋಹನ್ ಶೆಟ್ಟಿ ಮತ್ತು ಡಾ॥ ಶಾನಭಾಗ್ ಅವರುಗಳು ಆಸ್ಪತ್ರೆಗೆ ಧಾವಿಸಿ ಬಂದು ಆಕೆಯ ಜೀವವುಳಿಸಲು ನೆರವಾದ ಬಗ್ಗೆ ಅವರಿಬ್ಬರಿಗೂ ಪೋಲೀಸರು ಧನ್ಯವಾದ ಅರ್ಪಿಸಿದ್ದಾರೆ. ಆಕೆಯ ಮೇಲೆ ಆತ್ಮಹತ್ಯೆಗೆ ಯತ್ನಿಸಿದ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ.

ಓದುಗರ ಪತ್ರ

ಕ. ವಿ. ಮಂ. ಸಹಾಯಕ ಇಂಜಿನಿಯರ್‌ರಿಗೆ ಕೊಪ್ಪ ವಿದ್ಯುತ್ ಬಳಕೆದಾರರ ಒಂದು ಪತ್ರ

ಮಾನ್ಯರೇ,

ಕೊಪ್ಪ ಮೇಲಿನ ಪೇಟೆಯಲ್ಲಿ ಇತ್ತೀಚಿನ ದಿನಗಳಲ್ಲಿ ಕೆಲವು ಕಡೆಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ಪದೇ ಪದೇ ತಡೆಯಾಗುತ್ತಿರುವುದನ್ನು ನಾವು ಈಗಾಗಲೇ ಹಲವಾರು ಬಾರಿ ತಮ್ಮ ಗಮನಕ್ಕೆ ತಂದಿದ್ದೇವೆ. ಒಂದು ಸಾಲಿನಲ್ಲಿ ಸಮರ್ಪಕವಾಗಿ ವಿದ್ಯುತ್ ಸರಬರಾಜು ಆಗುತ್ತಿದ್ದರೆ ಮತ್ತೊಂದು ಸಾಲಿನಲ್ಲಿ ಸರಬರಾಜಿನಲ್ಲಿ ತೊಂದರೆಯುಂಟಾಗುವುದು ಸರ್ವೇ ಸಾಮಾನ್ಯವಾದ ಸಂಗತಿಯಾಗಿದೆ. ಈ ತೊಂದರೆಯನ್ನು ಕೂಡಲೆ ಸರಿಪಡಿಸಬೇಕಾಗಿ ವಿನಂತಿಸುತ್ತೇವೆ.

ವಿದ್ಯುತ್ ಸರಬರಾಜಿನಲ್ಲಿ ತೊಂದರೆಯುಂಟಾದಾಗ ನಾವು ನಿಮ್ಮ ಇಲಾಖೆಯ ಲೈನ್‌ಮನ್ (ವೈರ್‌ಮನ್)ಗಳನ್ನು ಕರೆಸಬೇಕಾದಲ್ಲಿ ಅನಿವಾರ್ಯವಾಗಿ ಸುಮಾರು 2 ಕಿ.ಮೀ. ನಡೆದು ಬಸ್‌ಸ್ಟ್ಯಾಂಡ್ ಸಮೀಪ ಹೋಗಬೇಕಾಗಿದೆಯಲ್ಲದೆ ಎಲ್ಲಾ ಸಮಯದಲ್ಲೂ ಅವರುಗಳು ಅಲ್ಲಿ ಸಿಗುವುದಿಲ್ಲ.

ಆದ್ದರಿಂದ ಕೊಪ್ಪ ಮೇಲಿನ ಪೇಟೆಯವರ ಉಪಯೋಗಕ್ಕಾಗಿ ಒಬ್ಬ ವಿದ್ಯುತ್ ವೈರ್‌ಮನ್ನರ ಸೇವೆಯನ್ನು ಒದಗಿಸಿಕೊಡಬೇಕಾಗಿ ಕೋರುತ್ತೇನೆ. ಅವರು ಕುಳಿತುಕೊಳ್ಳಲು ಸೂಕ್ತ ಸ್ಥಳದಲ್ಲಿ ವ್ಯವಸ್ಥೆ ಮಾಡಿಕೊಡಲು ನಾವು ತಯಾರಿರುತ್ತೇವೆ.

ಇದೇ ರೀತಿ ಕೆಳಗಿನ ಪೇಟೆಯಲ್ಲೂ ಬಸ್‌ಸ್ಟ್ಯಾಂಡಿನಿಂದ ಮುಂದೆ ಒಂದು ಲೈನಿನಲ್ಲಿ ವಿದ್ಯುತ್ ಸರಬರಾಜು ಇದ್ದಾಗ ಮತ್ತೊಂದು ಸಾಲಿನಲ್ಲಿ ಇಲ್ಲದಿರುವುದನ್ನು ಹಲವು ವಿದ್ಯುತ್ ಬಳಕೆದಾರರು ತಿಳಿಸಿರುತ್ತಾರೆ. ಆದ್ದರಿಂದ ಈ ವ್ಯಾಪಕವಾದ ತೊಂದರೆಯನ್ನು ಆದಷ್ಟು ಜಾಗ್ರತೆ ಸರಿಪಡಿಸಬೇಕೆಂದು ಆಶಿಸುತ್ತೇನೆ.

—ಕೊಪ್ಪ ಪೌರಹಿತ ರಕ್ಷಣಾ ಸಮಿತಿಯ ಪರವಾಗಿ,
ಎಂ. ಆರ್. ಕಣ್ಣನ್
ಗೌರವ ಕಾರ್ಯದರ್ಶಿ

ಪಶುಆಸ್ಪತ್ರೆ: ಸಂಚಾರಿವಾಹನ

ನ.ರಾ. ಪುರ: ಇಲ್ಲಿನ ಪಶು ಆಸ್ಪತ್ರೆಗೆ ಪಶ್ಚಿಮ ಘಟ್ಟಗಳಅಭಿವೃದ್ಧಿ ಯೋಜನೆಯಡಿ 2 ಲಕ್ಷ ರೂ. ವೆಚ್ಚದಲ್ಲಿ ಸಂಚಾರಿ ಪಶು ಚಿಕಿತ್ಸಾ ವಾಹನ ಮಂಜೂರಾಗಿರುವುದಾಗಿ ಪಶು ಸಂಗೋಪನಾ ಇಲಾಖೆ ಉಪ ನಿರ್ದೇಶಕ ಡಾ|| ಪಾರ್ಶ್ವನಾಥಯ್ಯ ತಿಳಿಸಿದ್ದಾರೆ.

ಕೊಪ್ಪ ಇಂಡಿಯನ್ ಬ್ಯಾಂಕ್ ರಜಾ ದಿನ ಭಾನುವಾರ

ಕೊಪ್ಪ: ಇಲ್ಲಿನ ಇಂಡಿಯನ್ ಬ್ಯಾಂಕ್ ಶಾಖೆಯ ವಾರದ ರಜೆಯನ್ನು ಹಾಲಿ ಇರುವ ಗುರುವಾರದ ಬದಲಾಗಿ ಭಾನುವಾರಕ್ಕೆ ಬದಲಾಯಿಸಲು (ದಿನಾಂಕ 13.10.86 ರಿಂದ ಮುಂದೆ) ನಿರ್ಧರಿಸಲಾಗಿದೆಯೆಂದು ಶಾಖಾ ಮ್ಯಾನೇಜರ್ ತಿಳಿಸಿದ್ದಾರೆ.

ಯಶಸ್ವಿ, ಆಕರ್ಷಕ ಜೇಸಿ ಸಪ್ತಾಹ

ಬಿಳಾಲುಕೊಪ್ಪ : ಇಲ್ಲಿನ ಮೇರುತಿ ಜೇಸೀಸ್ ಸಂಸ್ಥೆ ಸೆ. 9 ರಿಂದ 15 ರವರೆಗೆ ನಡೆಸಿದ ಜೇಸೀ ಸಪ್ತಾಹ ಹಳ್ಳಿಗಾಡಿನ ಜನರಿಗೆ ಹಲವು ರೀತಿಯಲ್ಲಿ ಉಪಯುಕ್ತವೂ ಉಲ್ಲಾಸಕರವೂ ಆಗಿ ಯಶಸ್ವಿಯಾಯಿತು.

ಸೆ. 9 ರಂದು ಮಣಿಪಾಲದ ಕೆ.ಎಂ.ಸಿ ಯ ನೇತ್ರ ತಜ್ಞ ಡಾ|| ಕರಿಯಪ್ಪ ಅವರ ನೇತೃತ್ವದ ವೈದ್ಯರ ತಂಡ ನಡೆಸಿಕೊಟ್ಟ ಉಚಿತ ದಂತ ಚಿಕಿತ್ಸಾ ಶಿಬಿರದಲ್ಲಿ 132 ಜನ ಚಿಕಿತ್ಸೆ ಪಡೆದು, ಆ ಪೈಕಿ 17 ಜನರಿಗೆ ಹೆಚ್ಚಿನ ಚಿಕಿತ್ಸೆಗಾಗಿ ಮಣಿಪಾಲಕ್ಕೆ ಬರಲು ಸೂಚಿಸಲಾಯಿತು. ಶ್ರೀಮತಿ ಟಿ ಒ ಥಾಮಸ್ ರವರ ನೇತೃತ್ವದಲ್ಲಿ ಶಿಬಿರ ಅಚ್ಚುಕಟ್ಟಾಗಿ ವ್ಯವಸ್ಥೆಗೊಳಿಸಲ್ಪಟ್ಟಿತ್ತು.

ಸೆ. 11 ರಂದು ಕಲ್ಲುಗುಡ್ಡೆ ಶಾಲೆಯ ಆಟದ ಮೈದಾನ ಮತ್ತು ಬಿಳಾಲುಕೊಪ್ಪ ಪಂಚಾಯ್ತಿ ಕಚೇರಿಯ ರಸ್ತೆ ಇವುಗಳನ್ನು ಶ್ರಮದಾನದಿಂದ ನಿರ್ಮಿಸಲಾಯಿತು. ಸೆ. 14 ರಂದು ದ್ವಿಚಕ್ರ ವಾಹನಗಳಿಗಾಗಿ ನಡೆದ 'ಮೇರುತಿ 150' ಮೋಟಾರ್ ರ‍್ಯಾಲಿ ಪೋಲೀಸರ ಹಾಗೂ ಸಾರ್ವಜನಿಕರ ಮತ್ತು ಸೋದರ ಸಂಘ–ಸಂಸ್ಥೆಗಳ ಉತ್ತಮ ಸಹಕಾರದಿಂದಾಗಿ ಸುಸೂತ್ರವಾಗಿ ನಡೆಯಿತು. 11 ಜನ ಸ್ಪರ್ಧಿಗಳು ಭಾಗವಹಿಸಿದ್ದು ಕೊಪ್ಪದ ಸತೀಶ್ ಶೆಟ್ಟಿ ಮೊದಲ ಸ್ಥಾನ ಪಡೆದರು.

ಅಂದು ಮಧ್ಯಾಹ್ನ ಜಯಪುರದಲ್ಲಿ 'ಮಾನವೀಯ ಸಂಬಂಧಗಳು' ಎಂಬ ವಿಷಯವಾಗಿ ಕೊಗ್ರೆ ಕಾರ್ಪೊರೇಷನ್ ಬ್ಯಾಂಕ್ ಮ್ಯಾನೇಜರ್ ಹಾಗೂ ಜೇಸೀ ಅಧ್ಯಕ್ಷ ಪಿ. ಎಸ್. ಭಟ್ ವಿಚಾರ ಸಂಕಿರಣ ನಡೆಸಿದರು.

ಇವಲ್ಲದೆ ಪ್ರೌಢಶಾಲಾ ವಿದ್ಯಾರ್ಥಿಗಳು ಮಹಿಳೆಯರು, ಪುರುಷರು, ವೃದ್ಧರು ಮುಂತಾದವರಿಗಾಗಿ ವಿವಿಧ ಸ್ಪರ್ಧೆಗಳು, ಪ್ರತಿಭಾ ಪ್ರದರ್ಶನ ಹಾಗೂ ಪ್ರತಿದಿನ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

ಸೆ. 9 ರಂದು ಶಿರೀಷ್ ಗುರ್ಜರ್ ಸಪ್ತಾಹವನ್ನು ಉದ್ಘಾಟಿಸಿದರು. ಬಿ. ಕೆ. ವೆಂಕಪ್ಪಯ್ಯ ಮತ್ತು ಕೌಳಿ ಶ್ರೀನಿವಾಸ್ ಮುಖ್ಯ ಅತಿಥಿಗಳಾಗಿದ್ದರು.

ಸೆ. 15 ರಂದು ನಡೆದ ಮುಕ್ತಾಯ ಸಮಾರಂಭದಲ್ಲಿ ಅಚ್ಯುತಪೈ ಮತ್ತು ಕೆ.ಜಿ. ಕೃಷ್ಣಯ್ಯಗೌಡ ಮುಖ್ಯ ಅತಿಥಿಗಳಾಗಿದ್ದರು. ಕೊಪ್ಪ ತಹಸೀಲ್ದಾರ್ ಶ್ರೀನಿವಾಸ್ ಬಹುಮಾನ ವಿತರಿಸಿದರು.

ಮುಂದಿನ ವರ್ಷ ಪರ್ವತಾರೋಹಣ ಸ್ಪರ್ಧೆ ?

ಈ ಪ್ರಾಂತ್ಯದ ಶಿಖರಗಳಲ್ಲೇ ಅತ್ಯಂತ ಎತ್ತರವಾದುದೆನ್ನಲಾದ ಮೇರುತಿ ಪರ್ವತವನ್ನು ಏರುವ "ಪರ್ವತಾರೋಹಣ ಸ್ಪರ್ಧೆ"ಯನ್ನು ಮುಂದಿನ ವರ್ಷದ ಜೇಸೀ ಸಪ್ತಾಹದಲ್ಲಿ ಏರ್ಪಡಿಸಲು ಸಂಸ್ಥೆ ಯೋಚಿಸಿರುವುದಾಗಿ ತಿಳಿದು ಬಂದಿದೆ.

ಕುಟುಂಬ ಯೋಜನೆ ಶಿಬಿರ

ಕೊಪ್ಪ: ಸಾರ್ವಜನಿಕ ಶಿಕ್ಷಣ ಇಲಾಖೆ (ಪ್ರಾಥಮಿಕ ಶಿಕ್ಷಣ) ಮತ್ತು ಸಮಗ್ರ ಶಿಶು ಕಲ್ಯಾಣ ಇಲಾಖೆಗಳ ಸಂಯುಕ್ತ ಆಶ್ರಯದಲ್ಲಿ ಕೊಪ್ಪ ಲಯನ್ಸ್ ಕ್ಲಬ್ ಸಹಯೋಗದೊಂದಿಗೆ ಸೆ. 19ರಂದು ಇಲ್ಲಿನ ಜನರಲ್ ಆಸ್ಪತ್ರೆಯಲ್ಲಿ ಏರ್ಪಡಿಸಲಾಗಿದ್ದ ಸಂತಾನ ಹರಣ ಶಸ್ತ್ರ ಚಿಕಿತ್ಸಾ ಶಿಬಿರದಲ್ಲಿ 47 ಮಹಿಳೆಯರಿಗೆ ಸಂತಾನ ಹರಣ ಶಸ್ತ್ರ ಚಿಕಿತ್ಸೆ ನಡೆಸಲಾಗಿದೆ. ಸಹಕರಿಸಿದ ಪ್ರಾಥಮಿಕ ಶಿಕ್ಷಕರಿಗೂ ಮತ್ತು ಅಂಗನವಾಡಿ ಕಾರ್ಯಕರ್ತೆಯರಿಗೂ ಅಧಿಕಾರಿಗಳು ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

'ಪೋಲೀಸ್ ದೌರ್ಜನ್ಯ' ಪ್ರತಿಭಟನೆ

ಹರಿಹರಪುರ : ಇಲ್ಲಿನ ಪೋಲೀಸರು ಕಳೆದ ಒಂದು ವರ್ಷದಿಂದಲೂ ನಿರಪರಾಧಿಗಳಿಗೆ ವೃಥಾ ಕಿರುಕುಳ ಕೊಡುತ್ತಿದ್ದಾರೆಂದು ಆಪಾದಿಸಿರುವ ಸ್ಥಳೀಯ ಬಿ.ಜೆ.ಪಿ ಘಟಕವು ಈ ಬಗ್ಗೆ ಮೇಲಧಿಕಾರಿಗಳಲ್ಲಿ ಹಲವು ಬಾರಿ ದೂರಿದ್ದಾಗ್ಯೂ ಯಾವುದೇ ಪರಿಣಾಮವಾಗಿಲ್ಲದಿರುವುದರಿಂದ ಸೆ. 28ರಂದು ಪ್ರತಿಭಟನೆ ನಡೆಸಲು ನಿರ್ಧರಿಸಿದೆ. ಬಿ.ಜೆ.ಪಿ. ಶಾಸಕರಾದ ಕರಂಬಳ್ಳಿ ಸಂಜೀವಶೆಟ್ಟಿ ಹಾಗೂ ಯಡಿಯೂರಪ್ಪ ಅವರುಗಳು ಈ ಪ್ರತಿಭಟನೆಯಲ್ಲಿ ಪಾಲ್ಗೊಳ್ಳುವರೆಂದು ತಾ|| ಬಿಜೆಪಿ ಅಧ್ಯಕ್ಷ ಬಿ. ಎಂ. ರಘುನಾಥ್ ತಿಳಿಸಿದ್ದಾರೆ.

ಹೇರೂರು - ದೂಬಳದ ಕೆಲವು ಸಮಸ್ಯೆಗಳು

(ವರದಿ: ಎಚ್. ವಿ. ಶ್ರೀವತ್ಸ)

ಹೇರೂರು: ದೂಬಳ–ಬಸರಿಕಟ್ಟೆ ರಸ್ತೆ ದುರಸ್ತಿ ಕಾರ್ಯ, ಪೂರ್ಣವಾಗಿ ವಾಹನ ಸೌಕರ್ಯದ ಏರ್ಪಾಡು ಆಗಲಿದೆ ಎಂಬ ಸುದ್ದಿ ಹುಟ್ಟಿದ್ದು ಬೇಗಾನೆ ರಾಮಯ್ಯನವರ ಕಾಲದಲ್ಲಿ. ಅಲ್ಲಿಂದ ಈವರೆವಿಗೂ ಸುದ್ದಿ ಗಾಳಿಯಲ್ಲಿ ಗುದ್ದಾಡುತ್ತಲೇ ಇದೆ. ಕಾರ್ಯರೂಪಕ್ಕೆ ಬರಲಿಲ್ಲ.

ರಿಪೇರಿ ವೈಖರಿ: ಅಂದು–ಇಂದು

ದೂಬಳ ಕೈಮರದಿಂದ ದೂಬಳ ಎಸ್ಟೇಟ್ ರಸ್ತೆಯನ್ನು ಅನೇಕ ವರ್ಷಗಳಿಂದ ಎಸ್ಟೇಟಿನವರು ಸ್ವತಃ ರಿಪೇರಿ ಮಾಡಿಸುತ್ತಿದ್ದರು. ಮಾಡುತ್ತಿದ್ದ ರಸ್ತೆ ದುರಸ್ತಿ ಕಾರ್ಯ ಚೊಕ್ಕಟವಾಗಿರುತ್ತಿತ್ತು.

ಆದರೆ ಕಳೆದ ಸಾಲಿನಿಂದ ಈ ರಸ್ತೆ ಲೋಕೋಪಯೋಗಿ ಇಲಾಖೆಗೆ ಸೇರಿಸಲ್ಪಟ್ಟಿದ್ದು ಈ ಇಲಾಖೆಯ ವತಿಯಿಂದ ಕಂಟ್ರಾಕ್ಟ್ ವಹಿಸಿಕೊಂಡವರು ರಿಪೇರಿ ಮಾಡಿದ್ದಾರೆ. ಈ ರಿಪೇರಿ ಕಾರ್ಯ ಎಷ್ಟರಮಟ್ಟಿಗೆ ವ್ಯವಸ್ಥಿತವಾಗಿದೆ ಎನ್ನುವುದಕ್ಕೆ, ರಸ್ತೆಯ ಉದ್ದಕ್ಕೂ ಬಿದ್ದಿರುವ ರಾಶಿಕಲ್ಲುಗಳು, ಕೈಚರಂಡಿ ಇಲ್ಲದೇ ಆದ ಹೊಂಡಗಳು ಸಾಕ್ಷಿ ಹೇಳುತ್ತವೆ. ಈ ಬಗ್ಗೆ ದಿನವೂ ಶಾಲೆಗೆ ಹೋಗುವ ಮಕ್ಕಳೂ ಸಹ ವಟಗುಟ್ಟುತ್ತಾರೆ.

ವಿದ್ಯುತ್ ಕಂಬಗಳು ವಾಲಿವೆ

ದೂಬಳದ ಸುತ್ತಲಿರುವ ಹುಲಸೆ, ತೋಟದಮನೆ– ಈ ಸ್ಥಳಗಳಲ್ಲಿ ಹಳೆಯದಾದ ವಿದ್ಯುತ್ ಕಂಬಗಳು ವಾಲಿಕೊಂಡಿದ್ದು, ಯಾವಾಗ ಬೇಕಾದರೂ ದಿಢೀರನೆ ಬಿದ್ದು ಅಪಾಯ ಸಂಭವಿಸಬಹುದು. ಸಂಬಂಧಿಸಿದ ಇಲಾಖೆಯವರು ಕೂಡಲೇ ಸೂಕ್ತ ಬದಲಾವಣೆಗೆ ವ್ಯವಸ್ಥೆ ಮಾಡುವುದು ಒಳ್ಳೆಯದು.

ದೂಬಳ, ಸುತ್ತಿನಗದ್ದೆ, ಹುಲಸೆ ಮುಂತಾದ ಮನೆಗಳಿಗೆ ಭೇಟಿ ನೀಡಬೇಕಾದ ಗದ್ದೆಮನೆ – ಬಸರಿಕಟ್ಟೆ ವಲಯದ ಮಿಡ್‌ವೈಫ್ ಕಾಣೆಯಾಗಿ ಮೂರು ವರ್ಷಗಳು ಕಳೆದವು. (ಇದು ಅಂದಾಜು ಲೆಖ್ಖ. ಸರಿ ಲೆಖ್ಖದಲ್ಲಿ ಜಾಸ್ತಿ ಆಗಿದೆ.) ಗ್ರಾಮಾಂತರ ಪ್ರದೇಶದ ಗರ್ಭಿಣಿ ಸ್ತ್ರೀಯರಿಗೆ, ಮಕ್ಕಳಿಗೆ ನೆರವಾಗಬೇಕಾದ ಮಿಡ್‌ವೈಫ್ ಗೈರುಹಾಜರಿ ಬಗ್ಗೆ ಈ ಹಿಂದೆ ಸಂಬಂಧಪಟ್ಟ ಅಧಿಕಾರಿಗಳಿಗೆ ಬರೆದಾಗಿದೆ. 'ಲಂಕೇಶ್ ಪತ್ರಿಕೆ'ಯಲ್ಲಿ ಈ ಬಗ್ಗೆ ವರದಿ ಬಂದಿದೆ. ಸಂಬಳ ತೆಗೆದುಕೊಂಡೂ ಕೆಲಸ ಮಾಡದಿರುವರೆ? ಅಥವಾ ಈ ವಲಯಕ್ಕೆ ಸಂಬಂಧಿಸಿ ಯಾರೂ ನೇಮಕವಾಗಿಲ್ಲವೆ? ಗದ್ದೆಮನೆ–ಬಸರಿಕಟ್ಟೆ ವಲಯ ರದ್ದು ಮಾಡಿ ಹೇರೂರಿಗೆ ಹೊಸತಾಗಿ ಒಬ್ಬರನ್ನು ನೇಮಕ ಮಾಡಿದರೂ ಆದೀತೆಂದು ಜನರ ಅಭಿಪ್ರಾಯ.

ಈ ಎಲ್ಲಾ ಸಮಸ್ಯೆಗಳಿಗೆ ಸಂಬಂಧಪಟ್ಟ ಇಲಾಖೆಯವರು ಗಮನ ಹರಿಸುವರಾಗಿ ಜನತೆ ನಂಬಿ ನಿರೀಕ್ಷಿಸುತ್ತಾರೆ.

"ವೀಐಪಿಗಳ ದುಬಾರಿ ತೀರ್ಥಯಾತ್ರೆಗಳು" ಮುಂದಿನ ಸಂಚಿಕೆಯಲ್ಲಿ ಮುಂದುವರಿಯುವುದು. —ಸಂ.

ವೆಂಕಟಸ್ವಾಮಿ ವರದಿ ಪ್ರತಿಭಟಿಸಿ ಸೆ. 19ರಂದು

ಕೊಪ್ಪ ಬಂದ್, ಮೆರವಣಿಗೆ

ಕೊಪ್ಪ : ವೆಂಕಟಸ್ವಾಮಿ ವರದಿಯನ್ನು ವಿರೋಧಿಸಿ ಸೆ. 19 ರಂದು ಇಲ್ಲಿ ಬಂದ್ ಮತ್ತು ಬೃಹತ್ ಮೆರವಣಿಗೆ ನಡೆದವು. ನಂತರ ಒಕ್ಕಲಿಗರ ಸಂಘದ ಉಪಾಧ್ಯಕ್ಷ ಬಿ. ಜಿ. ಚಿದಂಬರ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಬಿ. ಜಿ. ಚಂದ್ರಶೇಖರ್, ಜಾಳುಮರ ಸುಬ್ರಾನ್, ಕಳಸಪ್ಪ, ಎಂ. ಸಿ. ಅಶೋಕ್, ಪಜ್ರಪ್ಪ, ಕಾಡಪ್ಪಗೌಡ ಮುಂತಾದವರು ಮಾತನಾಡಿದರು. ವೆಂಕಟಸ್ವಾಮಿ ವರದಿಯನ್ನು ತಿರಸ್ಕರಿಸಿ, ಹಾವನೂರ್ ವರದಿಯನ್ನೇ ಮುಂದುವರಿಸಬೇಕೆಂದು ಡಿ. ನಾಗರಾಜ್ ಮಂಡಿಸಿದ ನಿರ್ಣಯವನ್ನು ಸಭೆ ಅಂಗೀಕರಿಸಿ, ಅನಂತರ ಅದನ್ನು ತಹಸೀಲ್ದಾರರಿಗೆ ಸಲ್ಲಿಸಲಾಯಿತು.

ಬಡ ರೈತರ ಭೂಮಿಗೆ ಹಕ್ಕು ಪತ್ರ ಪಡೆಯಲು ಹೋರಾಟಕ್ಕೆ ನಿರ್ಧಾರ

ನರಸಿಂಹರಾಜಪುರ:

ಸ್ಥಳೀಯ ಬಡ ರೈತರು ಸಾಗುವಳಿ ಮಾಡುತ್ತಿರುವ ಭೂಮಿಗಳಿಗೆ ಹಕ್ಕು ಪತ್ರಗಳನ್ನು ಪಡೆಯುವ ಸಲುವಾಗಿ ಬೃಹತ್ ಹೋರಾಟವನ್ನು ಸಂಘಟಿಸಲು ಇಲ್ಲಿನ ಬಿ.ಎಚ್. ಕೈಮರದ ಸಿ.ಪಿ.ಐ. ಶಾಖೆ ನಿರ್ಧರಿಸಿದೆ. ಈ ಶಾಖೆಯನ್ನು ಇತ್ತೀಚೆಗೆ ಜಿಲ್ಲಾ ಕಾರ್ಯದರ್ಶಿ ಬಿ. ಕೆ. ಸುಂದರೇಶ್ ಉದ್ಘಾಟಿಸಿದರು

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: ಸಿರಿಮನೆ ನಾಗರಾಜ್, ಅಚ್ಚು: ದೀಪಟಿಗೆ ಅಚ್ಚುಕೂಟ, ಕೊಪ್ಪ